


### ಜಯತು ಜಯ ವಿಠಲಾ

'ನಡೀರೆಲ್ಲಾ ಪಂಢರೀಲಾ' (ಜು. 10, ಬಸವರಾಜ್ ಸಂಪಳ್ಳಿ) ಮುಖಪುಟ ಲೇಖನದಲ್ಲಿ ಪಂಢರಪುರದ ವಿಠಲನ ಇತಿಹಾಸದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಹಂಚಿಕೊಂಡಿರುವುದು ಶ್ಲಾಘನೀಯ. ಕರ್ನಾಟಕದ ಚಿಕ್ಕೋಡಿ ತಾಲ್ಲೂಕಿನ ಅಂಕಲಿಯ ಶಿಥೋಳೆ ಮನೆತನದವರ ಕುದುರೆಯ ಮೇಲೆ ಸಂತ ತುಕಾರಾಮರ ಪಲ್ಲಕ್ಕಿ ಉತ್ಸವ ವಾರಕರಿ ಪಂಥದೊಡನೆ ಸಾಗುವ ಭಕ್ತಗಣ, ಗರ್ಭಗುಡಿಗೆ ಭಕ್ತರ ನೇರ ಪ್ರವೇಶದೊಂದಿಗೆ ಪಾದಸ್ಪರ್ಶ, ವಿಠಲನ ಓಲೆ ಮೀನುಗಳು, ನಮ್ಮ ವಿಠಲ ಅವರ ವಿಠೋಬಾ... ಇತ್ಯಾದಿ ಇತ್ಯಾದಿ.

—ಪರಮೇಶ್ವರ ಜೆ.ಎಂ., ಸಂಡೂರು

### ಭಕ್ತಿಪರವಶ ಸಂಚಿಕೆ

ಆಷಾಢ ಮಾಸದ ಏಕಾದಶಿಯಂದು ಸೊಲ್ಲಾಪುರ ಜಿಲ್ಲೆಯ ಪಂಢರಪುರದಲ್ಲಿ ನೆಲೆಸಿರುವ ಪಂಢರಿನಾಥನ ದರ್ಶನಕ್ಕೆ ಭಕ್ತಾದಿಗಳು ನೂರಾರು, ಸಾವಿರಾರು ಕಿಲೋಮೀಟರ್ ದೂರದಿಂದ ಬರಿಗಾಲಲ್ಲಿ ತಂಡೋಪತಂಡವಾಗಿ ಬರುವುದು ಅಚ್ಚರಿ. ಹಿರಿಯರು, ಕಿರಿಯರು, ಯಾವುದೇ ಭೇದಭಾವವಿಲ್ಲದೆ ಅಭಂಗವನ್ನು ಹಾಡುತ್ತಾ ತುಳಸಿಯನ್ನು ತಲೆ ಮೇಲೆ ಇಟ್ಟುಕೊಂಡು ಬರಿಗಾಲಲ್ಲಿ ಪಂಢರಿನಾಥನ ದರ್ಶನಕ್ಕೆ ಬರುವಾಗ ಭಕ್ತಿಗೆ ಸಾಟಿಯಿಲ್ಲ ಎನಿಸುತ್ತದೆ. ಅಚಲ ಭಕ್ತಿಗೆ ಜಗದ್ಗುರು ಒಲಿಯುವನೆಂಬ ನಂಬಿಕೆ. ಭಕ್ತಿಪರವಶ ಸಂಚಿಕೆ.

—ಮಧು, ಬೆಂಗಳೂರು

### ಕನ್ನಡದ ವಿಠಲ!

ಕೇವಲ ಪುರಂದರದಾಸರಲ್ಲದೆ ಗೋಪಾಲ ದಾಸರು ವಿಜಯದಾಸರು ಜಗನ್ನಾಥದಾಸರು ಶ್ರೀಪಾದ ರಾಜರು ತಮ್ಮ ಕೀರ್ತನೆಗಳಲ್ಲಿ ಅಂಕಿತನಾಮದ ಜತೆ ವಿಠಲನನ್ನು ಸೇರಿಸಿದ್ದಾರೆ. ಹೀಗಾಗಿ ವಿಠೋಬಾ ಕನ್ನಡದವನು ಎನ್ನಬಹುದು. ಪಂಢರಪುರದ ಯಾತ್ರೆ ಮಾಡುವ ಸಾಕಷ್ಟು ಯಾತ್ರಿಕರು ಕುಂಕುಮದಂತೆ ಹುಡಿಯಾಗಿರುವ ಬುಕ್ಕಿಟ್ಟು ಎಂಬ ಕಪ್ಪು ತಿಲಕ ಹಚ್ಚಿಕೊಳ್ಳುತ್ತಾರೆ.

—ಮುಕುಂದ ಹೇರ್ಕಲ್, ಬೆಂಗಳೂರು

### ಪಂಢರಿನಾಥನ ವೈಭವ

ಆಷಾಢ ಏಕಾದಶಿಯಂದು ಪಂಢರಿನಾಥನ ದರ್ಶನಕ್ಕೆ ಭಕ್ತರು ವಿಠಲನ ನಾಮಸ್ಮರಣೆಯೊಂದಿಗೆ ಪಾದಯಾತ್ರೆ ಮಾಡುತ್ತಾ ಭಕ್ತಿಭಾವದೊಂದಿಗೆ ಮಿಳಿತವಾಗುವ ಸಂಭ್ರಮದ ವಾತಾವರಣವನ್ನು ಕಟ್ಟಿಕೊಟ್ಟ ಲೇಖಕರು ನಮಗೂ ಪಂಢರಿನಾಥನ ದರ್ಶನ ಮಾಡಿಸಿ ಪುನೀತಗೊಳಿಸಿದ್ದಾರೆ.

—ಭಾರತೀ ಗಂಗಾಧರ್, ಬೆಂಗಳೂರು

### ಭಕ್ತಿಭಾವದ ಕನವರಿಕೆ

ಲೇಖನ ಓದುತ್ತಾ ನಾವೂ ಪಂಢರಪುರದ ಉತ್ಸವದಲ್ಲಿ ಭಾಗವಹಿಸುತ್ತಿರುವ ಹಾಗೆ ಅನಿಸಿತು. 'ವಿಠಲನ ನೆನಕೆಯಲ್ಲಿ ಭಕ್ತಿಯ ಕನವರಿಕೆ!' (ಉಮಾ ಅನಂತ್) ಲೇಖನದಲ್ಲಿ ವಿಠಲನ ಹಾಡುಗಳ ವಿಮರ್ಶೆ, ಅದರಲ್ಲೂ ನಮ್ಮ ಬಾಲ್ಯದ ದಿವಸಗಳಲ್ಲಿ ಹಾಡುತ್ತಿದ್ದ 'ಜಯತು ಜಯ ವಿಠಲಾ' ಮರುಕಳಿಸಿತು!

— ಸೀತಾ ಕೇಶವ, ಸಿಡ್ನಿ

### ಕುತೂಹಲಕಾರಿ ಲೋಕ

'ವೈಟಮೊ; ಬೆಳಕಿನ ಹುಳಗಳ ವಿಸ್ಮಯಲೋಕ' (ಜು. 10, ಡಾ. ಅನುಪಮಾ ಎಚ್.ಎಸ್.) ಕುತೂಹಲಕಾರಿ ವಿಷಯವನ್ನು ಪರಿಚಯಿಸಿದ್ದಾರೆ. ನಾನು 2019ರಲ್ಲಿ ನ್ಯೂಜಿಲೆಂಡ್ ಪ್ರವಾಸದಲ್ಲಿ ಈ



ಸ್ಥಳವನ್ನು ನೋಡಿದ್ದೇನೆ. ಲೇಖನದಲ್ಲಿ ಹೇಳಿರುವಂತೆ ಎಲ್ಲವನ್ನೂ ವೀಕ್ಷಿಸಿ ಆನಂದ ಅನುಭವಿಸಿದ್ದೇನೆ. ನಿಜಕ್ಕೂ ಇದು ಒಂದು ಅದ್ಭುತ ಪ್ರಪಂಚ ಹಾಗೂ ಉತ್ತಮ ಪ್ರವಾಸ ಲೇಖನ. ಅದೇ ಪ್ರದೇಶದ ಹತ್ತಿರ ಒಂದು ಬಿಸಿನೀರಿನ ಬುಗ್ಗೆಯೂ ಇದೆ. ಅದು ನೋಡಲು ಆಕರ್ಷಣೀಯವಾಗಿದೆ.

—ಟಿ.ಎಸ್. ನಾಗರಾಜ ರಾವ್

### ವಿಚಾರಗಳ ಲಹರಿ

ಮೀನಾಕ್ಷಿ ಬಾಳಿಯವರ ವಿಚಾರ ಲಹರಿ ಬರಹಗಳು ನಗಿಸುತ್ತವೆ, ತಲೆಯಲ್ಲಿಳಿದು ವಿಚಾರಗಳನ್ನು ಬಗೆಯುತ್ತವೆ. ಕಲ್ಯಾಣ ಕರ್ನಾಟಕದ ಭಾಷಾ ಪ್ರಯೋಗದಿಂದಾಗಿ ಹೃದಯದಲ್ಲಿ ಮಾಗುತ್ತವೆ. ಕರ್ನಾಟಕದೆಲ್ಲೆಡೆಯೂ ಉತ್ತಮ ಬರಹಗಾರರಿದ್ದಾರೆ ಎಂದು ಅರಹುತ್ತವೆ.

—ಮಾಲತಿ ಪಟ್ಟಣಶೆಟ್ಟಿ

### ಲಿಂಗ ತಾರತಮ್ಯದ ನೋಟ

'ಒಡಪಿನ ಒಯ್ಯಾರ' (ಜು. 10, ಮೀನಾಕ್ಷಿ ಬಾಳಿ) 'ವಿಚಾರ ಲಹರಿ' ಚೆನ್ನಾಗಿದೆ. ಮದುವೆ ಕಾಲಕ್ಕೆ ಸತಿ ಪತಿಗಳು ಈ ಹಿಂದೆ ಹೇಳುತ್ತಿದ್ದ ಒಡಪುಗಳ ಲಿಂಗ ತಾರತಮ್ಯದ ಬಗ್ಗೆ ಲೇಖಕರು ಬರೆದುದು ಸತ್ಯ. ಇಂದಿನ ಮದುವೆಗಳಲ್ಲಿ ಈ ಹೆಸರು ಕೇಳುವುದು ನಿಂತುಹೋಗಿದೆ. ಅದು ನೇಪಥ್ಯಕ್ಕೆ ಸರಿದುದಕ್ಕೆ ದುಃಖವಿಲ್ಲ.

—ಕೆ.ಬಿ. ಹೊನ್ನಾಯ್ಕ ಸರ್, ಸದಲಗಾ ಚಿಂಚಣಿ

### ಉತ್ತಮ ಸಲಹೆ ಸೂಚನೆ

'ನಾಲಗೆ ಶುಚಿಗೊಳಿಸಿ ಆರೋಗ್ಯ ಪಾಲಿಸಿ' (ಜು. 10, ಡಾ. ಮುರಲೀಮೋಹನ ಚೂಂತಾರ್) ಆರೋಗ್ಯ ಲೇಖನ ನಾಲಗೆಯ ಶುಚಿತ್ವ ಪಾಲನೆಯ ಬಗ್ಗೆ ಉಪಯುಕ್ತ ಮಾಹಿತಿ, ಸಲಹೆ ಸೂಚನೆಗಳನ್ನು ನೀಡಿದೆ.

—ಲಕ್ಷ್ಮಣ್ ಗೊರ್ಲಕಟ್ಟೆ, ಮೈಸೂರು

### ಲವಲವಿಕೆಯ ಮಂದಹಾಸ

'ಸಾಲಾಯ ತಸ್ಮೈ ನಮಃ' (ಜು. 10, ಸುಮಾ ರಮೇಶ್) ಮಂದಹಾಸ ಬರಹ ಬಹಳ ಸೊಗಸಾಗಿದೆ. ಲವಲವಿಕೆಯಿಂದ ಕೂಡಿದೆ. ಲೇಖಕರು ಹೇಳಿದಂತೆ, ಕಾಲಕಾಲಕ್ಕೆ ಸಾಲದ ಸ್ವರೂಪ ಬದಲಾದರೂ ಸಾಲವಂತೂ ಜೀವಂತ.

—ಪ್ರತಿಮಾ ಕಾಂತರಾಜು




### ತಿದ್ದುಪಡಿ

ಜುಲೈ 17ನೇ ಸಂಚಿಕೆಯ 'ಪದಬಂಧ' ವಿಭಾಗದಲ್ಲಿ ಹಿಂದಿನ ಸಂಚಿಕೆಯ ಸರಿ ಉತ್ತರ ಪ್ರಕಟವಾಗಬೇಕಿತ್ತು. ಕಣ್ತಪ್ಪಿನಿಂದ ಅದೇ ವಾರದ ಉತ್ತರ ಪ್ರಕಟವಾಗಿದ್ದು, ಓದುಗರಿಗೆ ಗೊಂದಲವಾಗಿದೆ. ಈ ತಪ್ಪಿಗೆ ವಿಷಾದಿಸುತ್ತೇವೆ. —ಸಂ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in